## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 56 (89) |
| ಸದಸ್ಯರ ಹೆಸರು | : | ಶ್ರೀ. ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 09.07.2018 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಆಯುಷ್ ಇಲಾಖೆಯ ಲಿಪಿಕ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ /ನೌಕರರುಗಳು ಸರ್ಕಾರಿ ಸೇವೆಗೆ ಸೇರಿದ ದಿನಾಂಕದಿಂದ 30 ವರ್ಷಗಳಿಗೆ ಮೇಲ್ಪಟ್ಟು ಬೆಂಗಳೂರು ನಗರದಲ್ಲಿಯೇ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಇವರುಗಳು ಬೆಂಗಳೂರಿನಲ್ಲಿಯೇ ಕಾರ್ಯನಿರ್ವಹಿಸಲು ಕಾರಣಗಳೇನು; (ವಿವರ ನೀಡುವುದು).</td><td>ನೌಕರರ ವಿವರಗಳು ಈ ಕೆಳಕಂಡಂತಿರುತ್ತವೆ.
<table>
<tr><th>ನೌಕರರ ಹೆಸರು</th><th>ಕಾರ್ಯ ನಿರ್ವಹಿಸಿದ ಕಛೇರಿ</th><th>ಪದನಾಮ</th><th>ಇಂದ</th><th>ರವರೆಗೆ</th></tr>
<tr><td rowspan="5">ಶ್ರೀ. ಎಂ.ಬಸವರಾಜಯ್ಯ</td><td>ಆಯುಷ್ ನಿರ್ದೇಶನಾಲಯ ಬೆಂಗಳೂರು</td><td>ದ್ವಿ.ದ.ಸ.</td><td>13.02.1984</td><td>11.12.1995</td></tr>
<tr><td>ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಬೆಂಗಳೂರು</td><td>ಪ್ರ.ದ.ಸ.</td><td>11.12.1995</td><td>19.07.2002</td></tr>
<tr><td>ಶ್ರೀ.ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆ ಬೆಂಗಳೂರು</td><td>ಪ್ರ.ದ.ಸ</td><td>19.07.2002</td><td>02.06.2011</td></tr>
<tr><td rowspan="2">ಆಯುಷ್ ನಿರ್ದೇಶನಾಲಯ ಬೆಂಗಳೂರು</td><td>ಕಛೇರಿ ಅಧೀಕ್ಷಕರು</td><td>03.06.2011</td><td>30.08.2016</td></tr>
<tr><td>ಸಹಾಯಕ ಆಡಳಿತಾಧಿಕಾರಿಗಳು</td><td>31.08.2016</td><td>ಈವರೆಗೆ</td></tr>
</table></td></tr>
<tr><td>ಆ)</td><td>ಆಯುಷ್ ಇಲಾಖೆಯ ಲಿಪಿಕ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮೂರು ಪದೋನ್ನತಿ ಪಡೆದ ನಂತರವು ಬೆಂಗಳೂರಿನಲ್ಲಿಯೇ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ವಿವರ ನೀಡುವುದು).</td><td>ಪದೋನ್ನತಿ ನೀಡುವ ಸಂದರ್ಭದಲ್ಲಿ ಬೆಂಗಳೂರಿನ ಅಧೀನ ಕಛೇರಿಗಳಲ್ಲಿ ಹುದ್ದೆಗಳು ಖಾಲಿ ಇದ್ದುದ್ದರಿಂದ ಕೌನ್ಸಿಲಿಂಗ್ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿ ಮಾಡಿದ್ದು, ಸದರಿಯವರು ಬೆಂಗಳೂರಿನ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಆಯ್ಕೆ ಮಾಡಿಕೊಂಡ ಸ್ಥಳಗಳಿಗೆ ಸಂಸ್ಥೆಗಳ ಆಡಳಿತಾತ್ಮಕ ಹಿತದೃಷ್ಟಿಯಿಂದ ಇವರನ್ನು ತೈನಾತಿಸಲಾಗಿದೆ.</td></tr>
<tr><td>ಇ)</td><td>ಆಯುಷ್ ಇಲಾಖೆಯ ಲಿಪಿಕ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮೇಲಿನ ಹುದ್ದೆಗೆ ಪದೋನ್ನತಿ ಪಡೆದ ನಂತರವು ಅದೇ ಹುದ್ದೆ /ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವವರ ವಿವರ ನೀಡುವುದು.</td><td>ಆಯುಷ್ ಇಲಾಖೆಯ ಲಿಪಿಕ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ನೌಕರರು ಪದೋನ್ನತಿಯ ನಂತರ ಅದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ.<br><br>ಆದರೆ ಆಯವ್ಯಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧೀಕ್ಷಕರು, ಆಯವ್ಯಯ ತಯಾರಿಕೆ, ಕ್ರಿಯಾ ಯೋಜನೆಗಳ ತಯಾರಿಕೆ, ವೆಚ್ಚಗಳ ನಿಯಂತ್ರಣ, ಹೊಸ ಹೊಸ ಯೋಜನೆಗಳ ರೂಪುರೇಷೆ ನಿಗದಿಪಡಿಸುವುದು ಮತ್ತು ಲೆಕ್ಕಪತ್ರ ವಿಷಯಗಳಲ್ಲಿ ಹೆಚ್ಚು ಅನುಭವ ಹೊಂದಿದ್ದರಿಂದ ಇವರನ್ನು ಪದೋನ್ನತಿಯ ನಂತರ ಆಯವ್ಯಯ ವಿಭಾಗದ ಜೊತೆಗೆ ಯೋಜನಾ ವಿಭಾಗ, ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ಸಿದ್ಧಪಡಿಸುವ ಕೆಲಸಗಳನ್ನು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಣೆ ಮತ್ತು ನಿರ್ದೇಶಕರ ಆದೇಶಾನುಸಾರ ಕರ್ತವ್ಯ ನಿರ್ವಹಿಸುವ ದೃಷ್ಟಿಯಿಂದ ಸಹಾಯಕ ಆಡಳಿತಾಧಿಕಾರಿ ಹುದ್ದೆಯನ್ನು ಆಯವ್ಯಯ ವಿಭಾಗದಲ್ಲಿರಿಸಿ, ಈ ಹುದ್ದೆ ಖಾಲಿಯಾಗಿದ್ದರಿಂದ ಜೇಷ್ಠತಾ ಪಟ್ಟಿಯನ್ನು ಆಧರಿಸಿ, ಜೇಷ್ಠತೆಯಲ್ಲಿ ಹಿರಿಯರಾದವರನ್ನು ನಿಯಮಾನುಸಾರ ಕೌನ್ಸಿಲಿಂಗ್ ಆಧಾರದ ಮೇಲೆ ಪದೋನ್ನತಿ ನೀಡಿ ನೇಮಿಸಲಾಗಿದೆ.</td></tr>
</table>

**ಈ)** ಆಯುಷ್ ನಿರ್ದೇಶನಾಲಯದ ಆಯವ್ಯಯ ವಿಭಾಗದ ಅಧೀಕ್ಷಕರು ಅದೇ ಸ್ಥಳದಲ್ಲಿ ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ; ಇವರಿಗೆ ಪದೋನ್ನತಿ ನೀಡಲು ಸಹಾಯಕ ಆಡಳಿತ ಹುದ್ದೆಯನ್ನು ಬೇರೆ ಕಛೇರಿಯಿಂದ ಸ್ಥಳಾಂತರಿಸಿ ಅವರಿಗೆ ಪದೋನ್ನತಿ ನೀಡಿ ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸಲಾಗಿದೆಯೇ; ಇದ್ದಲ್ಲಿ, ಕಾರಣಗಳೇನು?

ಪ್ರಸ್ತುತ ಆಯವ್ಯಯ ವಿಭಾಗದ ಅಧೀಕ್ಷಕರ ಹುದ್ದೆ ಖಾಲಿ ಇರುತ್ತದೆ.

ಆಯುಷ್ ಇಲಾಖೆಯಲ್ಲಿನ ಎಲ್ಲಾ ಕಛೇರಿಗಳಲ್ಲಿ ಕೆಲಸದೊತ್ತಡ ಮತ್ತು ಅವಶ್ಯಕತೆಯನ್ನು ಪರಿಗಣಿಸಿ, ಪರಿಣಾಮಕಾರಿ ತ್ವರಿತ ಹಾಗೂ ಸಮರ್ಪಕ ಕಾರ್ಯ ನಿರ್ವಹಣೆಯ ದೃಷ್ಟಿಯಿಂದ ಕಡಿಮೆ ಕೆಲಸದೊತ್ತಡವಿರುವ ಕಛೇರಿಗಳಿಂದ ಸಹಾಯಕ ಆಡಳಿತಾಧಿಕಾರಿ ಹಾಗೂ ಇನ್ನಿತರ ಹುದ್ದೆಗಳನ್ನು ಹೆಚ್ಚು ಕೆಲಸದೊತ್ತಡವಿರುವ ಹಾಗೂ ತುಂಬಾ ಅವಶ್ಯವಿರುವ ಕಛೇರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಆಕುಕ/49/ಪಿಐಎಂ/2016, ಬೆಂಗಳೂರು ದಿನಾಂಕ : 21-06-2016 ರಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಿಲ್ಲದಂತೆ ಸ್ಥಳಾಂತರಿಸಲಾಗಿದೆ. ಅಂತಹ ಹುದ್ದೆಗಳಲ್ಲಿ ನಿರ್ದೇಶನಾಲಯದ ಸಹಾಯಕ ಆಡಳಿತಾಧಿಕಾರಿಯ ಹುದ್ದೆಯು ಒಂದಾಗಿದೆ.

ಆಯವ್ಯಯ ವಿಭಾಗದ ಜೊತೆಗೆ ಯೋಜನಾ ವಿಭಾಗ, ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ಸಿದ್ಧಪಡಿಸುವ ಕೆಲಸಗಳನ್ನು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಣೆ ಮತ್ತು ನಿರ್ದೇಶಕರ ಆದೇಶಾನುಸಾರ ಕರ್ತವ್ಯ ನಿರ್ವಹಿಸುವ ದೃಷ್ಟಿಯಿಂದ ಸ್ಥಳಾಂತರಗೊಂಡ ಸಹಾಯಕ ಆಡಳಿತಾಧಿಕಾರಿ ಹುದ್ದೆಯನ್ನು ಆಯವ್ಯಯ ವಿಭಾಗದಲ್ಲಿರಿಸಿ, ಈ ಹುದ್ದೆ ಖಾಲಿಯಾಗಿದ್ದರಿಂದ ಜೇಷ್ಠತಾ ಪಟ್ಟಿಯನ್ನು ಆಧರಿಸಿ, ಜೇಷ್ಠತೆಯಲ್ಲಿ ಹಿರಿಯರಾದವರನ್ನು ನಿಯಮಾನುಸಾರ ಪದೋನ್ನತಿ ನೀಡಿ ನೇಮಿಸಲಾಗಿದೆ.

ಆಯವ್ಯಯ ವಿಭಾಗದಲ್ಲಿನ ಸಹಾಯಕ ಆಡಳಿತಾಧಿಕಾರಿಗಳ ಹುದ್ದೆ ಭರ್ತಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯ ಸೇವೆಯು ವರ್ಗಾವಣೆಗೆ ನಿಗದಿಪಡಿಸಿದ ಕನಿಷ್ಠ ಸೇವೆಯನ್ನು ಪೂರ್ಣಗೊಳಿಸಿರುವುದಿಲ್ಲ. ಆದ್ದರಿಂದ ಆ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಯು ನಿಯಮಾನುಸಾರ ವರ್ಗಾವಣೆಗೆ ಅರ್ಹತೆ ಹೊಂದಿಲ್ಲದ ಕಾರಣ ವರ್ಗಾವಣೆಗೆ ಪರಿಗಣಿಸಿರುವುದಿಲ್ಲ.

**ಉ)** ಕಳೆದ ಐದು ವರ್ಷಗಳಿಂದ ಕೌನ್ಸಿಲಿಂಗ್ ಮುಖಾಂತರ ವರ್ಗಾವಣೆಯಾದ ಲಿಪಿಕ ನೌಕರರ ಸಂಖ್ಯೆ ಎಷ್ಟು; ಕೌನ್ಸಿಲಿಂಗ್ ಹೊರತುಪಡಿಸಿ ವರ್ಗಾವಣೆಯಾದ ಲಿಪಿಕ ನೌಕರರ ಸಂಖ್ಯೆ ಎಷ್ಟು; ಅವಧಿ ಪೂರ್ಣಗೊಳ್ಳದ ವರ್ಗಾವಣೆಯಾದ ನೌಕರರ ಸಂಖ್ಯೆ ಎಷ್ಟು? (ವಿವರ ನೀಡುವುದು).

**ಕೌನ್ಸಿಲಿಂಗ್ ಮುಖಾಂತರ ವರ್ಗಾವಣೆಯಾದ ಲಿಪಿಕ ನೌಕರರ ಸಂಖ್ಯೆ**

| | | | |
|---|---|---|---|
| 1 | 2013–14 | 03 | ವಿವರವನ್ನು ಅನುಬಂಧದಲ್ಲಿರಿಸಿದೆ. |
| 2 | 2014–15 | 06 | |
| 3 | 2015–16 | 06 | |
| 4 | 2016–17 | 02 | |
| 5 | 2017–18 | 03 | |

**ಕೌನ್ಸಿಲಿಂಗ್ ಹೊರತುಪಡಿಸಿ ವರ್ಗಾವಣೆಯಾದ ಲಿಪಿಕ ನೌಕರರ**

| | | | |
|---|---|---|---|
| 1 | 2013–14 | – | ವಿವರವನ್ನು ಅನುಬಂಧದಲ್ಲಿರಿಸಿದೆ. |
| 2 | 2014–15 | – | |
| 3 | 2015–16 | – | |
| 4 | 2016–17 | – | |
| 5 | 2017–18 | 16 | |

**ಅವಧಿ ಪೂರ್ಣಗೊಳ್ಳದೆ ವರ್ಗಾವಣೆಯಾದ ನೌಕರರ ಸಂಖ್ಯೆ**

| | | | |
|---|---|---|---|
| 1 | 2013–14 | – | ವಿವರವನ್ನು ಅನುಬಂಧದಲ್ಲಿರಿಸಿದೆ. |
| 2 | 2014–15 | – | |
| 3 | 2015–16 | – | |
| 4 | 2016–17 | – | |
| 5 | 2017–18 | 08 | |

**ಆಕುಕ 18 ಐಎಂಇ 2018**

(ಶಿವಾನಂದ ಎಸ್.ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 56(89)ರ ಪ್ರಶ್ನೆ (ಉ)ಗೆ ಅನುಬಂಧ

| ವಿವರ | ವರ್ಷ | ಸಂಖ್ಯೆ | ಷರಾ |
|---|---|---|---|
| ಕೌನ್ಸಿಲಿಂಗ್ ಮುಖಾಂತರ | 2013-14 | 03 | ನೌಕರರ ಕೋರಿಕೆ ಮೇರೆ ಕೌನ್ಸಿಲಿಂಗ್ ಮುಖಾಂತರ ವರ್ಗಾಯಿಸಿ ಸ್ಥಳ ನಿಯುಕ್ತಿಗೊಳಿಸಿದೆ. |
| | 2014-15 | 06 | |
| | 2015-16 | 06 | |
| | 2016-17 | 02 | |
| | 2017-18 | 03 | |
| ಕೌನ್ಸಿಲಿಂಗ್ ಹೊರತು ಪಡಿಸಿ | 2013-14 | - | |
| | 2014-15 | - | |
| | 2015-16 | - | |
| | 2016-17 | - | |
| | 2017-18 | 16 | ನಿರ್ದೇಶಕರ ಹಂತದಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ 07 ಲಿಪಿಕ ವೃಂದದ ನೌಕರರನ್ನು ವರ್ಗಾಯಿಸಲಾಗಿದೆ ಹಾಗೂ ಸರ್ಕಾರದ ಹಂತದಲ್ಲಿ 08 ಲಿಪಿಕ ವೃಂದದ ನೌಕರರನ್ನು ವರ್ಗಾಯಿಸಲಾಗಿದೆ. |
| ಅವಧಿ ಪೂರ್ವ ವರ್ಗಾವಣೆ | 2013-14 | - | |
| | 2014-15 | - | |
| | 2015-16 | - | |
| | 2016-17 | - | |
| | 2017-18 | 08 | 02-ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಮಾನ್ಯ ಆಯುಕ್ತರ ಸೂಚನೆ ಮೇರೆಗೆ ನಿರ್ದೇಶಕರು ವರ್ಗಾಯಿಸಿ ನೇಮಿಸಿರುತ್ತಾರೆ.<br>06 - ಸರ್ಕಾರದ ಹಂತದಲ್ಲಿ ವರ್ಗಾಯಿಸಿ ನೇಮಿಸಲಾಗಿದೆ. |

***